ಅಲ್ಲಿದ್ದಾರೆ. ಅವರಲ್ಲಿ ಒಬ್ಬರು ಇ.ಎನ್.ಟಿ ಮತ್ತು ಒಬ್ಬರು ಅನ್‌ಸ್ತೇಷಿಯಾ ಡಾಕ್ಟರುಗಳನ್ನು ಬಿಟ್ಟರೆ ಉಳಿದವರೆಲ್ಲಾ ಅಲ್ಲಿದ್ದಾರೆ. ಅನಧಿಕೃತವಾಗಿ ಗೈರಿಹಾಜರಾಗಿದ್ದರೆ ಅಲ್ಲಿಂದ ವರದಿಯನ್ನು ತರಿಸಿಕೊಂಡು ಅವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳುವುದಾಗಿ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಪಿ.ಎಸ್. ಜಯಂತ : ದೀರ್ಘಕಾಲದ ಮೇಲೆ ರಜೆ ಹೋಗುವ ವೈದ್ಯರ ಬಗ್ಗೆ ತಮ್ಮ ಪಾಲಿಸಿ ಏನು?

ಡಾ॥ ಹೆಚ್.ಸಿ. ಮಹದೇವಪ್ಪ : ಈಗಾಗಲೇ ಹೇಳಿದ್ದೇನೆ. ವರದಿಯನ್ನು ತರಿಸಿಕೊಂಡು ಯಾವ ಆಧಾರದ ಮೇಲೆ ರಜೆ ಹೋಗಿದ್ದಾರೆಂಬುದನ್ನು ತಿಳಿದುಕೊಂಡು ಪರಿಶೀಲಿಸಿ ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಿ.ಎಸ್. ಜಯಂತ : ಇದರ ಜೊತೆಗೆ ಕಳೆದ ಒಂದು ವರ್ಷದಿಂದ ದವಾಖಾನೆಯಲ್ಲಿ ವಾಹನವಿದ್ದರೂ ಅದಕ್ಕೆ ಚಾಲಕರಿಲ್ಲದೆ ವಾಹನ ಹಾಳಾಗುತ್ತಿದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಡಾ॥ ಹೆಚ್.ಸಿ. ಮಹದೇವಪ್ಪ : ಇದರ ಬಗ್ಗೆ ಶೀಘ್ರ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಕಡೂರು ಬೀರೂರು ಮಧ್ಯ ಕ್ರೀಡಾಂಗಣ ನಿರ್ಮಾಣ ಕುರಿತು

904 - ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಡೂರು, ಬೀರೂರು ಮಧ್ಯೆ ನಿರ್ಮಾಣವಾಗುತ್ತಿರುವ ತಾಲ್ಲೂಕು ಕ್ರೀಡಾಂಗಣದ ವೆಚ್ಚವೆಷ್ಟು?

ಆ) ಈ ಕ್ರೀಡಾಂಗಣವನ್ನು ಕಟ್ಟುವುದರಿಂದ ಸಾರ್ವಜನಿಕರ ಉಪಯೋಗವಾಗದೇ ಬೀರೂರು ಮತ್ತು ಕಡೂರು ಕ್ರೀಡಾಪಟುಗಳಿಗೆ 3 ಕಿ.ಮೀ. ದೂರವಾಗುವುದನ್ನು ಸರ್ಕಾರ ಗಮನಿಸಿದೆಯೇ:

ಇ) ಈ ಕ್ರೀಡಾಂಗಣ ನಿರ್ಮಾಣವಾಗುವುದರಿಂದ ಪ್ರಥಮ ದರ್ಜೆ ಕಾಲೇಜಿಗೆ ಉಪಯೋಗವಾಗುವುದನ್ನು ಸರ್ಕಾರ ಗಮನಿಸಿದೆಯೇ:

ಈ) ಇದು ತಾಲ್ಲೂಕು ಕ್ರೀಡಾಂಗಣವಾಗಿರುವುದರಿಂದ ಪಟ್ಟಣದಲ್ಲಿಯೇ ನಿರ್ಮಾಣ ಮಾಡಲು ಸಾಧ್ಯವೇ?

ಶ್ರೀ ಅಜಯಕುಮಾರ್ ಸರ್. ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು) :

ಅ) ಅಂದಾಜು ವೆಚ್ಚ ರೂ 15.61 ಲಕ್ಷಗಳು.

ಆ) ಈ ಕ್ರೀಡಾಂಗಣವು ಬೀರೂರು ಮತ್ತು ಕಡೂರಿನಿಂದ ಸುಮಾರು 3 ಕಿ.ಮೀ. ದೂರ ಇರುತ್ತದೆ. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಎರಡೂ ಪಟ್ಟಣಗಳಿಗೆ ಉಪಯೋಗವಾಗುತ್ತದೆ.

ಇ) ಹೌದು

ಈ) ಕಡೂರು ಪಟ್ಟಣದಲ್ಲಿ ಸೂಕ್ತವಾದ ಇತರ ಸ್ಥಳ ದೊರೆಯದೇ ಇದ್ದುದರಿಂದ ಪ್ರಸಕ್ತ ಸ್ಥಳದಲ್ಲಿಯೇ ಕ್ರೀಡಾಂಗಣದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಕಡೂರು - ಬೀರೂರು ಮಧ್ಯದಲ್ಲ ಸುಮಾರು 15 ಲಕ್ಷ ರೂ.ಗಳ ಅಂದಾಜಿನಲ್ಲಿ ಒಂದು ಕ್ರೀಡಾಂಗಣವನ್ನು ನಿರ್ಮಿಸುತ್ತಿದ್ದಾರೆ ಇದು ಸಾರ್ವಜನಿಕರಿಗೆ ಉಪಯೋಗವಾಗುವುದಿಲ್ಲ. ಮಾನ್ಯ ಸಚಿವರು

ಸ್ಥಳ ಪರುಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳತಕ್ಕದ್ದು ಒಳ್ಳೆಯದೆಂದು ತಮ್ಮ ಮೂಲಕ ತಿಳಿಸಬಯಸುತ್ತೇನೆ.

ಶ್ರೀ ಅಜಯಕುಮಾರ್ ಸರ್. ನಾಯಕ್ : ಮಾನ್ಯ ಅಧ್ಯಕ್ಷರೆ. ಈ ಕ್ರೀಡಾಂಗಣ ಕೆಲಸಕ್ಕೆ 91-92ನೇ ಸಾಲಿನಲ್ಲಿ ಅಡ್ಮಿನಿಸ್ಟ್ರೇಟಿವ್ ಕ್ಲಿಯರೆನ್ಸ್ ಕೊಟ್ಟಿದ್ದು, ಇದರ ಅಂದಾಜು ವೆಚ್ಚ 15.61 ಲಕ್ಷ. ಈಗತಾನೆ ಮಾನ್ಯ ಸದಸ್ಯರು ಈ ಕ್ರೀಡಾಂಗಣ ಕಡೂರಿನಿಂದ 3 ಕಿ.ಮೀ. ದೂರ ಇರುವುದರಿಂದ ಇದು ಸಾರ್ವಜನಿಕರಿಗೆ ಉಪಯೋಗವಾಗುವುದಿಲ್ಲವೆಂದು ಹೇಳಿದರು. ಆದರೆ ಈ ಕ್ರೀಡಾಂಗಣವನ್ನು ಅಲ್ಲಿರತಕ್ಕ ವೇದ ವಿದ್ಯಾ ಸಂಸ್ಥೆಯಲ್ಲಿ ನಾವು ಶುರುಮಾಡಿದ್ದೇವೆ. ಈ ಸಂಸ್ಥೆಯ ಆವರಣದಲ್ಲಿ ಈ ಕ್ರೀಡಾಂಗಣವನ್ನು ಶುರು ಮಾಡಿರುವುದರಿಂದ ಅಲ್ಲಿಯ ವಿದ್ಯಾರ್ಥಿಗಳು ಈ ಕ್ರೀಡಾಂಗಣದ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬಹುದೆಂದು ನನಗನ್ನಿಸುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಈ ಕ್ರೀಡಾಂಗಣದ ಒಂದು ಖಾಸಗೀ ಪ್ರಥಮ ದರ್ಜೆ ಕಾಲೇಜಿಗೆ ಮಾತ್ರ ಉಪಯೋಗವಾಗುತ್ತದೆ. ಅದು ತಾಲ್ಲೂಕು ಕ್ರೀಡಾಂಗಣವಾಗುವುದಿಲ್ಲ. ನಾವು 15 ಲಕ್ಷ ರೂಗಳನ್ನು ಖರ್ಚು ಮಾಡುತ್ತಿರುವುದು ಕೇವಲ ಆ ಸಂಸ್ಥೆಯ ವಿದ್ಯಾರ್ಥಿಗಳಿಗೆ ಅಲ್ಲಿ ಸಾರ್ವಜನಿಕರಿಗೂ ಉಪಯೋಗಕ್ಕೆ ಇದು ಬರುವಂತಾಗಬೇಕೆಂಬುದೆನ್ನು ಮಾನ್ಯ ಸಚಿವರು ಗಮನಕ್ಕೆ ತೆಗೆದುಕೊಂಡರೆ ಒಳ್ಳೆಯದು. ಅಲ್ಲಿ ಏನೇನೂ ಕೆಲಸ ನಡೆದಿಲ್ಲ. ಬಹುಶ: ಸುಮಾರು 1 ಅಥವಾ 1.5 ಲಕ್ಷ ರೂ.ನಷ್ಟು ಕೆಲಸ ನಡೆದಿರಬಹುದು. ಮುಂದಿನ ಹಿತದೃಷ್ಟಿಯಿಂದ ಈ ಕೆಲಸವನ್ನು ನಿಲ್ಲಿಸುವುದು ಒಳ್ಳೆಯದೆಂದು ಅಭಿಪ್ರಾಯಪಡುತ್ತೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಪ್ರೌಢಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅರೆಕಾಲಿಕ ಶಿಕ್ಷಕರ ಸಂಖ್ಯೆ ಕುರಿತು

1144 - ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿನ ಪ್ರೌಢಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅರೆಕಾಲಿಕ ಶಿಕ್ಷಕರ ಸಂಖ್ಯೆ ಎಷ್ಟು?*

ಆ) *ಅವರುಗಳ ಸೇವೆಯನ್ನು ಖಾಯಂ ಮಾಡುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?*

ಇ) *ಹಾಗಿದ್ದಲ್ಲಿ ಯಾವಾಗ?*

ಈ) *ಇಲ್ಲವಾದಲ್ಲಿ ಕಾರಣವೇನು?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 225

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

ಈ) ಈ ಅರೆಕಾಲಿಕ ಶಿಕ್ಷಕರುಗಳನ್ನು ಚಾಲ್ತಿಯಲ್ಲಿರುವ ವೈಂದ ಮತ್ತು ನೇಮಕಾತಿ ನಿಯಮ ಹಾಗೂ ಮೀಸಲಾತಿ ನಿಯಮಗಳನ್ನು ಅನುಸರಿಸಿ ನೇಮಕ ಮಾಡಿಲ್ಲದಿರುವುದರಿಂದ ಅವರುಗಳ ಸೇವೆಯನ್ನು ಖಾಯಂ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಇವರಿಗೆ ಅವರು ಸಲ್ಲಿಸಿದ ಪ್ರತಿ ವರ್ಷ ಸೇವೆಗೆ ಶೇ. 2 ರಷ್ಟು ಕೃಪಾಂಕ ನೀಡಿ ಅರ್ಹರೆಂದು ಕಂಡುಬಂದಲ್ಲಿ ಸಕ್ರಮ ನೇಮಕಾತಿ ಮಾಡಲಾಗುವುದು.